ಶ್ರೀ ಬಾಲಚಂದ್ರ ಜಾರಕಿಹೊಳಿ (ಪೌರಾಡಳಿತ ಮತ್ತ ನಗರ ಸ್ಥಳೀಯ ಸಂಸ್ಥೆಗಳು ಸಾರ್ವಜನಿಕ ಉದ್ಯಮಗಳ ಸಚಿವರು) :- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀ ಗೂಳಿಹಟ್ಟಿ ಡಿ.ಶೇಖರ್ ರವರು ಹೇಳಿದ ಹಾಗೆ, ಇಡೀ ರಾಜ್ಯದಲ್ಲಿರುವಂತಹ ನಗರ ಸಭೆ, ಪುರಸಭೆ, ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಸಿ.ಎ ಸೈಟ್ ಇರಬಹುದು ಹಾಗೂ ಪಾರ್ಕ್‌ಗೆ ಮೀಸಲಿಟ್ಟ ಜಮೀನಿನ ಬಗ್ಗೆ ಈಗಾಗಲೇ ನಮ್ಮ ಇಲಾಖೆಯ ಕಾರ್ಯದರ್ಶಿಯವರ ಮುಖಾಂತರ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸುತ್ತೋಲೆಯನ್ನು ಹೊರಡಿಸಿದ್ದೇವೆ. ಅದರ ಬಗ್ಗೆ ವರದಿ ಬಂದ ನಂತರ ಜಿಲ್ಲಾಧಿಕಾರಿಗಳ ಮುಖಾಂತರ ತಕ್ಷಣ ಕ್ರಮ ತೆಗೆದುಕೊಳ್ಳುತ್ತೇವೆಂದು ಮಾನ್ಯ ಸದಸ್ಯರ ಗಮನಕ್ಕೆ ತರಲು ಬಯಸುತ್ತೇನೆ.

ಅಧ್ಯಕ್ಷರು:-ಶ್ರೀ ಎನ್.ಎ. ಹ್ಯಾರೀಸ್‌ರವರು ಹಾಜರಿಲ್ಲ. ಶ್ರೀ ಡಿ.ಕೆ.ಶಿವಕುಮಾರ್‌ರವರುಹಾಜರಿಲ್ಲ.ಶ್ರೀ ಹೆಚ್.ಪಿ.ಮಂಜುನಾಥ್‌ರವರು ಮಾತನಾಡುವುದು.

ಶ್ರೀ ಹೆಚ್.ಪಿ.ಮಂಜುನಾಥ್ (ಹುಣಸೂರು):-ಈಗಾಗಲೇ ಬೆಳಗ್ಗೆ ಇದರ ಬಗ್ಗೆ ಪ್ರತಿಭಟನೆ ಕೂಡ ಮಾಡಿದ್ದೇನೆ. ಸರ್ಕಾರ ಕಣ್ಣು ಮುಚ್ಚಿ ಕುಳಿತಿದೆ. ಹೌಸಿಂಗ್ ಬೋರ್ಡ್ ವಿಚಾರದಲ್ಲಿ ಇದನ್ನು ತಡೆಯದೇ ಹೋದರೆ. . .

ಅಧ್ಯಕ್ಷರು:- ಇದು ಹೌಸಿಂಗ್ ಬೋರ್ಡ್ ವಿಚಾರ ಅಲ್ಲ. ಗುಂಡ್ಲುಪೇಟೆ ಕಾಡಂಚಿನ ಪ್ರದೇಶದಗ್ರಾಮಗಳಲ್ಲಿನ ರೈತರ ಜಮೀನಿನ ಬಗ್ಗೆ ಕೇಳಿ.

ಶ್ರೀ ಎಸ್.ಸುರೇಶ್ ಕುಮಾರ್:- ಹುಣಸೂರಿನಿಂದ ಗುಂಡ್ಲುಪೇಟೆಗೆ ಒತ್ತುವರಿಯಾಗಿರುವ ಸಮಸ್ಯೆ ಇದು.

3. ಗುಂಡ್ಲುಪೇಟೆ ಕಾಡಂಚಿನ ಚಿಕ್ಕೇರಿ ಕಟ್ಟೆ ಗ್ರಾಮದ ರೈತರ ಜಮೀನನ್ನು ಅರಣ್ಯ ಇಲಾಖೆಯವರು ತೆರವುಗೊಳಿಸುತ್ತಿರುವ ಬಗ್ಗೆ

ಶ್ರೀ ಹೆಚ್.ಪಿ.ಮಂಜುನಾಥ್:-ಚಿಕ್ಕೇರಿ ಕಟ್ಟೆ ಗ್ರಾಮಗಳಲ್ಲಿ ಬರುವಂಥದ್ದು, ಚರ್ಚೆ ಮಾಡಿರುವಂತಹ ವಿಚಾರಕ್ಕೆ ಒತ್ತಾಯಪೂರ್ವಕವಾಗಿ ತೆರವುಗೊಳಿಸುವ

ಕಾರ್ಯ ಅರಣ್ಯ ಇಲಾಖೆಯಿಂದ ಆಗುತ್ತಿದೆ. ಅದಕ್ಕೆ ಏನು ಕ್ರಮ ಕೈಗೊಳ್ಳಲಾಗಿದೆ ಎನ್ನುವ ಪ್ರಶ್ನೆಯನ್ನು ಮಾನ್ಯ ಅರಣ್ಯ ಸಚಿವರಿಗೆ ಕೇಳಿದ್ದೇನೆ.

ಶ್ರೀ ಸಿ.ಪಿ.ಯೋಗೀಶ್ವರ್ (ಮಾನ್ಯ ಅರಣ್ಯ ಸಚಿವರು):- ಇದಕ್ಕೆ ಸಂಬಂಧಿಸಿದಂತೆ ಮಾಹಿತಿಯನ್ನು ತರಿಸಿಕೊಂಡು ಹೇಳುತ್ತೇನೆ. ಸ್ವಲ್ಪ ಕಾಲಾವಕಾಶ ಬೇಕಾಗುತ್ತದೆ.

ಅಧ್ಯಕ್ಷರು:- ಮಾನ್ಯ ಶ್ರೀ ಸುನೀಲ್ ವಿ.ಹೆಗಡೆ ಹಾಜರಿಲ್ಲ. ಶ್ರೀ ಗೂಳಿಹಟ್ಟಿ ಡಿ.ಶೇಖರ್‌ರವರು ಮಾತನಾಡುವುದು.

4. ವಿಷಯ: ವಿದ್ಯಾವಿಕಾಸ ಯೋಜನೆಯಡಿಯಲ್ಲಿ ಶಾಲಾಮಕ್ಕಳಿಗೆ ಸಮವಸ್ತ್ರವನ್ನು ಜವಳಿ ಇಲಾಖೆಯಿಂದ ಖರೀದಿಸದೆ ಬೇರೆ ರಾಜ್ಯದ ಮಿಲ್-ಗಳಿಂದ ಖರೀದಿ ಮಾಡಿರುವ ಬಗ್ಗೆ.

ಶ್ರೀ ಗೂಳಿಹಟ್ಟಿ ಡಿ ಶೇಖರ್:- ಮಾನ್ಯ ಅಧ್ಯಕ್ಷರೆ, ಇವತ್ತು ಉತ್ತರ ಕರ್ನಾಟಕದ ಬಗ್ಗೆ ಈ ಸದನದಲ್ಲಿ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ವಿದ್ಯಾವಿಕಾಸ ಯೋಜನೆ ಎಂದು ಹೇಳಿ ಶಾಲಾ ಮಕ್ಕಳಿಗೆ ಸಮವಸ್ತ್ರವನ್ನು ನೀಡತಕ್ಕಂತಹ ಸಂದರ್ಭದಲ್ಲಿ ಶಿಕ್ಷಣ ಇಲಾಖೆಯು ಇಲ್ಲಿರುವಂತಹ ಸಾವಿರಾರು ಬಡನೇಕಾರರ ಹೊಟ್ಟೆಗೆ ಹೊಡೆಯುವಂತಹ ಕೆಲಸವನ್ನು ಮಾಡಿದ್ದಾರೆ.ಶಿಕ್ಷಣ ಇಲಾಖೆಯವರು ನೇಕಾರರಿಂದ ಸರಬರಾಜು ಮಾಡುವುದನ್ನು ಬಿಟ್ಟು ಬೇರೆ ರಾಜ್ಯದ ಒಂದು ಉದ್ಯಮದವರ ಮಿಲ್‌ಗಳಿಂದ ಆ ಸಮವಸ್ತ್ರವನ್ನು ಖರೀದಿ ಮಾಡುತ್ತಿದ್ದಾರೆ. ದಯಮಾಡಿ ಈ ತಕ್ಷಣವೆ ಶಿಕ್ಷಣ ಇಲಾಖೆಯವರು ಅವರಿಂದ ನೇರವಾಗಿ ಖರೀದಿ ಮಾಡುವುದನ್ನು ಕಡತಗೊಳಿಸಿ ಜವಳಿ ಇಲಾಖೆಯಿಂದ ಖರೀದಿಸಬೇಕು. ಬಡನೇಕಾರರು ನೇಯ್ಗೆ ಮಾಡತಕ್ಕಂತಹ ಬಟ್ಟೆಗಳನ್ನು ಸಮವಸ್ತ್ರಗಳಿಗೆ ಖರೀದಿ ಮಾಡಬೇಕೆಂದು ಹೇಳುತ್ತೇನೆ. ಶಿಕ್ಷಣ ಇಲಾಖೆಯು ಜವಳಿ ಇಲಾಖೆಯಿಂದಲೇ, ನೇಕಾರರಿಂದಲೇ ಖರೀದಿ ಮಾಡಬೇಕೆಂದು ಈ